<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಮತ್ತು ಮಾದಕದ್ರವ್ಯ ಪ್ರಕರಣಗಳ ವಿಶೇಷ ನ್ಯಾಯಾಲಯ, ಕೋಲಾರ</u>

**Spl. C. (NDPS) 31/2025**

ಪ್ರಾಸಾಃ **01** ಚಾಸಾಃ **10**
ದಿನಾಂಕಃ **06-08-2026**

| | |
|---|---|
| ಹೆಸರು | :: ಸವಿತಾ ಬಿ.ಎನ್ |
| ಗಂಡನ ಹೆಸರು | :: ರಮೇಶ್ |
| ವಯಸ್ಸು | :: 37 ವರ್ಷ |
| ಉದ್ಯೋಗ | :: ಸಹಾಯಕ ಔಷಧ ನಿಯಂತ್ರಕರು |
| ವಾಸ ಸ್ಥಳ | :: ಚಿಕ್ಕಬಳ್ಳಾಪುರ |

<u>ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.</u>

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಗಕರಾದ ಮಾಧವ ಪದ್ಮನಾಭ ಗಾವಂಕರ್ ರವರಿಂದಃ</u>

1. ದಿನಾಂಕ 27.01.2025 ರಿಂದ 17.03.2025 ರವರೆಗೆ ನಾನು ಕೋಲಾರದ ಸಹಾಯಕ ಔಷಧ ನಿಯಂತ್ರಕರ ಹೆಚ್ಚುವರಿ ಚಾರ್ಜ್ ನ್ನು ಹೊಂದಿದ್ದೆ. ದಿನಾಂಕ 12.03.2025 ರಂದು ಸುಮಾರು ಸಂಜೆ 5.30 ಕ್ಕೆ ಕೋಲಾರದ ಸಿಇಎನ್ ಪೋಲೀಸ್ ಠಾಣೆಯ ಇನ್ಸ್ ಪೆಕ್ಟರ್ ರವರು ಕರೆ ಮಾಡಿ ಅಮ್ಮೇರಹಳ್ಳಿ ಗ್ರಾಮದ ಹತ್ತಿರ ನಮ್ಮ ಸಿಬ್ಬಂದಿ ಗಸ್ತಿನಲ್ಲಿರುವಾಗ ಗಾಂಜಾ ಮತ್ತು ಇನ್ನಿತರೆ ಮತ್ತು ಬರುವ ಮಾದಕ ವಸ್ತುಗಳನ್ನು ಬೆಂಗಳೂರಿನಿಂದ ಸೈಯ್ಯದ್ ಫರ್ಕಾನ್ ಅಹಮದ್ ಎಂಬ ವ್ಯಕ್ತಿ ಕೆಟಿಎಂ ಬೈಕ್ ನಲ್ಲಿ ಕೋಲಾರ ಕಡೆಗೆ ತೆಗೆದುಕೊಂಡು ಬರುತ್ತಿದ್ದಾನೆಂದು ಖಚಿತ ಮಾಹಿತಿ ಬಂದಿದ್ದು, ತಾವು ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿದ್ದಾಗಿ ಮತ್ತು ಆರೋಪಿಯ ಅಂಗಶೋಧನೆಗೆ ಪತ್ರಾಂಕಿತ ಅಧಿಕಾರಿಯಾಗಿ ಬರುವಂತೆ ನನಗೆ ತಿಳಿಸಿದರು.

2. ನಾನು ಮಡೇರಹಳ್ಳಿ ಸಸ್ಯೋಧ್ಯಾನದ ಹತ್ತಿರ ಸಂಜೆ ಸುಮಾರು 6.00 ಗಂಟೆಗೆ ಹೋದೆ. ಇನ್ಸ್ ಪೆಕ್ಟರ್ ರವರು ಫೋನ್ ಮಾಡಿದಾಗ ನಾನು ಕಛೇರಿಯಲ್ಲಿ ಇದ್ದೆ. ನಾನು ಸ್ಥಳಕ್ಕೆ ಹೋದಾಗ ಅಲ್ಲಿ ಪೋಲೀಸ್ ಸಿಬ್ಬಂದಿ, ಇನ್ಸ್ ಪೆಕ್ಟರ್, ಪಂಚಸಾಕ್ಷಿದಾರರು ವಿಸಿಯಲ್ಲಿ ಕಾಣುತ್ತಿರುವ ಆರೋಪಿ ಇದ್ದರು. ನಾನು ಸದರಿ ಸ್ಥಳಕ್ಕೆ ಹೋದಾಗ ಇನ್ಸ್ ಪೆಕ್ಟರ್ ರವರು ನನಗೆ ಈಗ ತೋರಿಸಿದ ಮನವಿಯನ್ನು ನೀಡಿದರು. ಸದರಿ ಮನವಿಯನ್ನು ನಿ ಪಿ 1 ಎಂದು ಮತ್ತು ಅದರಲ್ಲಿರುವ

ಸಾಕ್ಷಿದಾರರ ಸಹಿಯನ್ನು ನಿ ಪಿ 1(ಎ) ಎಂದು ಗುರ್ತಿಸಲಾಯಿತು. ಆರೋಪಿಯ ಅಂಗಶೋಧನೆಯನ್ನು ಇನ್ಸ್ ಪೆಕ್ಟರ್ ರವರು ನನ್ನ ಸಮಕ್ಷಮ ಮಾಡಿದರು. ಆರೋಪಿಯ ಅಂಗಶೋಧನೆಯಲ್ಲಿ ಯಾವುದೇ ಮಾದಕ ವಸ್ತು ಸಿಕ್ಕಿಲ್ಲ.

3. ಆರೋಪಿ ತನ್ನ ಬೆನ್ನ ಹಿಂದೆ ಕಪ್ಪು ಬಣ್ಣದ ಒಂದು ಬ್ಯಾಗನ್ನು ಹಾಕಿಕೊಂಡಿದ್ದ. ಪೋಲೀಸ್ ಇನ್ಸ್ ಪೆಕ್ಟರ್ ರವರು ಆ ಬ್ಯಾಗನ್ನು ಪರಿಶೀಲಿಸಿ ಅದರಲ್ಲಿರುವ ವಸ್ತುಗಳನ್ನು ಹೊರಗೆ ತೆಗೆದರು. ಆ ರೀತಿ ಹೊರಗೆ ವಸ್ತು ಬಿಳಿ ಬಣ್ಣದ ಪೌಡರ್ ಇತ್ತು. ಆ ಪೌಡರ್ ಒಂದು ಪ್ಲಾಸ್ಟಿಕ್ ಕವರ್ ನಲ್ಲಿ ಇತ್ತು. ಆ ಪ್ಲಾಸ್ಟಿಕ್ ಕವರ್ ಮೇಲೆ ಎಂ.ಡಿ.ಎಂ.ಎ ಎಂದು ಬರೆದಿತ್ತು. ಪೋಲೀಸರು ಆರೋಪಿಗೆ ಸದರಿ ಪದಾರ್ಥವನ್ನು ಹೊಂದಲು ಪರವಾನಗಿ ಇದೆಯೇ ಎಂದು ಕೇಳಿದರು. ಅದಕ್ಕೆ ಆರೋಪಿಯು ತನ್ನ ಬಳಿ ಯಾವುದೇ ಪರವಾನಗಿ ಇಲ್ಲ ಎಂದು ತಿಳಿಸಿದ.

4. ನಂತರ ಪೋಲೀಸರು ಒಂದು ಡಿಜಿಟಲ್ ತೂಕದ ಯಂತ್ರವನ್ನು ತೆಗೆದುಕೊಂಡು ಬಂದರು. ಆ ಡಿಜಿಟಲ್ ತೂಕದ ಯಂತ್ರದಲ್ಲಿ ಕವರ್ ಸಮೇತ ಸದರಿ ಬಿಳಿ ಪದಾರ್ಥವನ್ನು ತೂಕ ಮಾಡಿದರು. ಅದು ಸುಮಾರು 806 ಗ್ರಾಂ ತೂಗಿತು. ಕವರ್ ಸಮೇತ ಪೋಲೀಸರು ಆ ಪದಾರ್ಥವನ್ನು ಬಿಳಿ ಬಟ್ಟೆ ಚೀಲದಲ್ಲಿ ಹಾಕಿ, ದಾರದಿಂದ ಕಟ್ಟಿ 'K' ಎಂಬ ಮೊಹರಿನಿಂದ ಅರಗಿನ ಸೀಲ್ ಹಾಕಿದರು. ನಂತರ ಸದರಿ ಚೀಲಕ್ಕೆ ನನ್ನ, ಪಂಚಸಾಕ್ಷಿದಾರರ, ಆರೋಪಿಯ ಮತ್ತು ಇನ್ಸ್ ಪೆಕ್ಟರ್ ರವರ ಸಹಿ ಇರುವ ಚೀಟಿಯನ್ನು ಅಂಟಿಸಲಾಯಿತು. ಪೋಲೀಸರು ಆರೋಪಿಯ ಬೈಕನ್ನೂ ಸಹಾ ಅಮಾನತ್ತು ಪಡಿಸಿಕೊಂಡರು. ಅದರ ಮೇಲೆ ನೋಂದಣಿ ಸಂಖ್ಯೆ ಇರಲಿಲ್ಲ. ಒಂದು ಮಹಜರನ್ನು ಆ ಸಮಯದಲ್ಲಿ ಮಾಡಿದರು. ಅದನ್ನು ಲ್ಯಾಪ್ ಟಾಪ್ ನಲ್ಲಿ ಟೈಪ್ ಮಾಡಿ ಜೀಪಿನಲ್ಲಿದ್ದ ಪ್ರಿಂಟರ್ ನಲ್ಲಿ ಪ್ರಿಂಟ್ ತೆಗೆದರು. ಈಗ ತೋರಿಸಿದ ದಾಖಲೆ ಸದರಿ ಮಹಜರು ಇದೆ. ಅದನ್ನು ನಿ ಪಿ 2 ಎಂದು ಮತ್ತು ಅದರಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿ ಪಿ 2(ಎ) ಎಂದು ಗುರ್ತಿಸಲಾಯಿತು. ಅಮಾನತ್ತು ಪ್ರಕ್ರಿಯೆ ಮಾಡುವಾಗ ಅದರ ವೀಡಿಯೋ ಚಿತ್ರೀಕರಣವನ್ನು ಇನ್ಸ್ ಪೆಕ್ಟರ್ ರವರು ಮಾಡಿಸಿದ್ದಾರೆ ಮತ್ತು ಆ ಸಮಯದಲ್ಲಿ ಈಗ ತೋರಿಸಿದ ಛಾಯಾಚಿತ್ರಗಳನ್ನು ತೆಗೆಸಿದ್ದಾರೆ. 10 ಛಾಯಾಚಿತ್ರಗಳನ್ನು ಒಟ್ಟಾಗಿ ನಿ ಪಿ 3 ಎಂದು ಗುರ್ತಿಸಲಾಯಿತು. ಆರೋಪಿಯ ಬಳಿ ಇದ್ದ ಕಪ್ಪು ಬಣ್ಣದ ಬ್ಯಾಗನ್ನು ನೋಡಿದರೆ ಗುರ್ತಿಸುತ್ತೇನೆ. ಸೀಲ್ ಆದ ಬಟ್ಟೆ ಚೀಲದಲ್ಲಿದ್ದ ಒಂದು ಬ್ಯಾಗನ್ನು ತೋರಿಸಲಾಗಿ ಸಾಕ್ಷಿದಾರರು ಅದೇ ಆರೋಪಿಯ ಬಳಿಯಿತ್ತು ಎಂದು ಗುರ್ತಿಸುತ್ತಾರೆ. ಅದನ್ನು ಮು ಮಾಲು 1 ಎಂದು ಗುರ್ತಿಸಲಾಯಿತು. ಈ ಪ್ರಕರಣದಲ್ಲಿ

ಅಮಾನತ್ತು ಪಡಿಸಿಕೊಂಡ ಬೈಕನ್ನು ವಿಸಿ ಮೂಲಕ ಸಾಕ್ಷಿಗೆ ತೋರಿಸಲಾಯಿತು. ಸಾಕ್ಷಿದಾರರು ಸದರಿ ಬೈಕ್ ನ್ನು ಗುರ್ತಿಸಿದ್ದು ಅದನ್ನು ಮು ಮಾಲು 2 ಎಂದು ಗುರ್ತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿತನ ಪರ ಶ್ರೀ ಎಂ.ಹೆಚ್ ವಕೀಲರಿಂದಃ</u>

5. ಇನ್ಸ್ ಪೆಕ್ಟರ್ ರವರು ಫೋನ್ ಮಾಡಿದ್ದು ಮತ್ತು ನಾನು ತನಿಖೆಗೆ ಹೋಗಿದ್ದಾಗಿ ನನ್ನ ಡೈರಿಯಲ್ಲಿ ನಾನು ನಮೂದಿಸಿದ್ದೇನೆ. ಅಲ್ಲಿಗೆ ಹೋದ ಸಮಯವನ್ನು ಡೈರಿಯಲ್ಲಿ ನಮೂದು ಮಾಡಿಲ್ಲ. ನನ್ನ ದೂರವಾಣಿ ಸಂಖ್ಯೆ 9742119994 ಇದೆ. ಇನ್ಸ್ ಪೆಕ್ಟರ್ ರವರು ಯಾವ ಸಂಖ್ಯೆಯಿಂದ ಕರೆ ಮಾಡಿದ್ದರು ಎಂದರೆ ಸಾಕ್ಷಿದಾರರು ಆ ಸಂಖ್ಯೆ ನೆನಪಿಲ್ಲ, ಆದರೆ ಅವರು ತಾವು ಸಿಇಎನ್ ಠಾಣೆಯ ಇನ್ಸ್ ಪೆಕ್ಟರ್ ಜಗದೀಶ್ ಎಂದು ಪರಿಚಯ ಮಾಡಿಕೊಂಡು ಬರುವಂತೆ ವಿನಂತಿಸಿದರು. ನನ್ನ ಡೈರಿಯಲ್ಲಿ ಪೋಲೀಸ್ ಇನ್ಸ್ ಪೆಕ್ಟರ್ ರವರು ಕರೆ ಮಾಡಿದ್ದಾಗಿ ನಮೂದು ಮಾಡಿದ್ದೇನೆ, ಆದರೆ ಅವರ ಹೆಸರು ನಮೂದು ಮಾಡಿಲ್ಲ.

6. ನಾನು ಸಸ್ಯೋಧ್ಯಾನದ ಹತ್ತಿರ ಹೋದಾಗ ಅಲ್ಲಿ 4-5 ಜನ ಪೋಲೀಸರಿದ್ದರು, ಇಬ್ಬರು ಪಂಚರಿದ್ದರು ಮತ್ತು ಸುತ್ತಲೂ ಸುಮಾರು ಸಾರ್ವಜನಿಕರು ನಿಂತಿದ್ದರು.

7. ನಾನು ಸ್ಥಳಕ್ಕೆ ಹೋಗುವುದರೊಳಗೆ ನಿ ಪಿ 1 ನ್ನು ಪೋಲೀಸರು ತಯಾರು ಮಾಡಿದ್ದರು. ನಿ ಪಿ 1 ಸ್ವಿಕರಿಸಿದ ಸಮಯವನ್ನು ಅದರಲ್ಲಿ ನಾನು ನಮೂದಿಸಿಲ್ಲ. ನಾನು ಫೀಲ್ಡ್ ಆಫೀಸರ್ ಆಗಿರುವುದರಿಂದ ನನ್ನ ಜೊತೆಯಲ್ಲಿ ಯಾವಾಗಲೂ ಸೀಲ್ ನ್ನು ತೆಗೆದುಕೊಂಡು ಹೋಗುತ್ತಿದ್ದೆ.

8. ನಾನು ಸ್ಥಳಕ್ಕೆ ಹೋದಾಗ ಮು ಮಾಲು 1 ಬ್ಯಾಗು ಆರೋಪಿಯ ಹತ್ತಿರವೇ ಇತ್ತು. ನಾನು ಹೋದ ಮೇಲೆ ಅದನ್ನು ಆರೋಪಿಯ ಕಡೆಯಿಂದ ಪೋಲೀಸರು ತೆಗೆದುಕೊಂಡರು. ಆ ಬ್ಯಾಗ್ ನಲ್ಲಿ ಏನಿತ್ತು ಎಂದು ನೀವು ಹೋಗುವ ಮೊದಲೇ ಪರಿಶೀಲನೆ ಮಾಡಿದ್ದರಾ ಅಥವಾ ನಿಮ್ಮ ಸಮಕ್ಷಮ ಪರಿಶೀಲನೆ ಮಾಡಿದ್ದಾರಾ ಎಂದರೆ ಸಾಕ್ಷಿದಾರರು ನಾನು ಹೋಗುವ ಮೊದಲೇ ಪರಿಶೀಲನೆ ಮಾಡಿ ಎಂ.ಡಿ.ಎಂ.ಎ ಎಂಬುದನ್ನು ಖಚಿತ ಪಡಿಸಿಕೊಂಡು ನನಗೆ ಫೋನ್ ಮಾಡಿ ಕರೆದಿದ್ದಾರೆ ಎನ್ನುತ್ತಾರೆ. ನಾನು ಹೋಗುವ ಮೊದಲು ಕಪ್ಪು ಬ್ಯಾಗನ್ನು ಸೀಜ್ ಮಾಡಿ ಸೀಲ್ ಮಾಡಿರಲಿಲ್ಲ. ನಾನು ಹೋದಾಗ ಕತ್ತಲಾಗಿರಲಿಲ್ಲ.

9. ಕೋಲಾರದಿಂದ ಬೆಂಗಳೂರು ಕಡೆಗೆ ಎಂದರೆ ಪೂರ್ವದಿಂದ ಪಶ್ಚಿಮಕ್ಕೆ ಹೋಗುವುದು ಎಂದರೆ ಸರಿ. ಸಸ್ಯೋಧ್ಯಾನ ಇದ್ದಿದ್ದು ರಸ್ತೆಯ ಉತ್ತರಕ್ಕೆ. ಆರೋಪಿಯನ್ನು ಹಿಡಿದು ನಿಲ್ಲಿಸಿದ್ದ ಜಾಗ ಡಾಂಬಾರು ರಸ್ತೆಯ ಪಕ್ಕ ಸಸ್ಯೋಧ್ಯಾನದ ಮುಖ್ಯ ಗೇಟಿನ ಮುಂದೆ. ಆ ಸಸ್ಯೋಧ್ಯಾನದಲ್ಲಿ ಜನರು ಕೆಲಸ ಮಾಡುತ್ತಿದ್ದರಾ ಎಂದರೆ ಸಾಕ್ಷಿದಾರರು ನಾವು ಗೇಟಿನ ಮುಂದೆ ಇದ್ದೆವು, ಗೇಟಿನ ಒಳಗೆ ಸ್ವಲ್ಪ ಜನ ಇದ್ದರು, ಅವರು ನಂತರ ಗೇಟಿನ ಹತ್ತಿರ ಬಂದರು ಎನ್ನುತ್ತಾರೆ. ನಾನು ಘಟನಾ ಸ್ಥಳಕ್ಕೆ ಹೋದೆ ಮತ್ತು ಅಲ್ಲಿ ನನಗೆ ನಿ ಪಿ 1 ನ್ನು ನೀಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ ಪಿ 1 ನ್ನು ನನ್ನ ಕಛೇರಿಗೆ ತಂದು ಅಲ್ಲಿ ಅದಕ್ಕೆ ನನ್ನ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ.

10. ಆರೋಪಿ ಏನು ಬಟ್ಟೆ ಹಾಕಿದ್ದ ಎಂದರೆ ಸಾಕ್ಷಿದಾರರು ನೆನಪಿಲ್ಲ ಎನ್ನುತ್ತಾರೆ. ಮಹಜರಿನಲ್ಲಿ ಆರೋಪಿ ಹಾಕಿಕೊಂಡ ಬಟ್ಟೆಯ ಬಗ್ಗೆ ವಿವರ ನಮೂದಿಸಿದ್ದಾರಾ ಎಂದರೆ ಸಾಕ್ಷಿದಾರರು ನೆನಪಿಲ್ಲ ಎನ್ನುತ್ತಾರೆ. ಘಟನಾ ಸ್ಥಳದಲ್ಲಿಯೇ ಪೋಲೀಸರು ನನ್ನ ಹೇಳಿಕೆ ಪಡೆದಿದ್ದಾರೆ. ಆರೋಪಿ ಧರಿಸಿದ್ದ ಬಟ್ಟೆಯ ಬಗ್ಗೆ ನನ್ನ ಪೋಲೀಸರಿಗೆ ನೀಡಿದ ಹೇಳಿಕೆಯಲ್ಲಿ ಹೇಳಿಲ್ಲ.

11. ಆ ಸ್ಥಳದ ಚೆಕ್ಕುಬಂಧಿ ಏನು ಎಂದರೆ ಸಾಕ್ಷಿದಾರರು ಕೋಲಾರ – ಬೆಂಗಳೂರು ಹೈವೇ ಮಡೇರಹಳ್ಳಿ ಸಸ್ಯೋಧ್ಯಾನದ ಮುಂದೆ ಎನ್ನುತ್ತಾರೆ. ಘಟನಾ ಸ್ಥಳದ ಪೂರ್ವಕ್ಕೆ ಪಶ್ಚಿಮಕ್ಕೆ ದಕ್ಷಿಣಕ್ಕೆ ಮತ್ತು ಉತ್ತರಕ್ಕೆ ಏನಿದೆ ಎಂದು ಪೋಲೀಸರಿಗೆ ನೀಡಿದ ಹೇಳಿಕೆಯಲ್ಲಿ ನಾನು ಹೇಳಿಲ್ಲ. ಇನ್ಸ್ ಪೆಕ್ಟರ್ ರವರು ತಮ್ಮ ಸಿಬ್ಬಂದಿಯ ಪರಿಚಯವನ್ನು ಮಾಡಿಸಿದ್ದರು. ನಾನು ಹೋಗುವುದರೊಳಗೆ ಪೋಲೀಸರು ಆರೋಪಿಯನ್ನು ಹಿಡಿದಿದ್ದರು.

12. ಸದರಿ ಪದಾರ್ಥ ಎಂ.ಡಿ.ಎಂ.ಎ ಎಂದು ಪೋಲೀಸರು ತಿಳಿಸಿದ ಮೇರೆಗೆ ಗೊತ್ತು. ನನಗೆ ಎಂ.ಡಿ.ಎಂ.ಎ ಬಗ್ಗೆ ವೈಯಕ್ತಿಕ ಮಾಹಿತಿ ಇಲ್ಲ. ನನಗೆ ಇನ್ಸ್‌ಪೆಕ್ಟರ್ ರವರು ದೂರವಾಣಿ ಕರೆ ಮಾಡಿದಾಗ ಎಂ.ಡಿ.ಎಂ.ಎ ಸುಮಾರು 1 ಕೆಜಿ ಇರಬಹುದು ಎಂದು ತಿಳಿಸಿದ್ದರು. ಪದಾರ್ಥ ಇದ್ದ ಕವರ್ ಬಿಳಿ ಬಣ್ಣದ ಟ್ರಾನ್ಸ್‌ಪರೆಂಟ್ ಕವರ್. ನನ್ನ ಮುಂದೆ ಪೋಲೀಸರು ಪದಾರ್ಥದ ಸ್ಯಾಂಪಲ್ ತೆಗೆದಿಲ್ಲ.

13. ಮು ಮಾಲು 1 ಬ್ಯಾಗನ್ನೂ ಸಹಾ ಬಿಳಿ ಬಟ್ಟೆ ಚೀಲದಲ್ಲಿ ಹಾಕಿ, ಪ್ಯಾಕ್ ಮಾಡಿ, ಸೀಲ್ ಮಾಡಿದರು. ಪದಾರ್ಥ ಇದೆ ಎಂದು ಹೇಳಿದ ಕವರ್ ನ್ನು ಮತ್ತು ಕರಿ ಬ್ಯಾಗನ್ನು ಪ್ರತ್ಯೇಕವಾಗಿ ಪ್ಯಾಕ್ ಮಾಡಿ ಸೀಲ್ ಮಾಡಿದ್ದಾರಾ ಅಥವಾ ಎರಡನ್ನೂ ಒಂದೇ ಚೀಲದಲ್ಲಿ ಹಾಕಿ ಪ್ಯಾಕ್ ಮಾಡಿದ್ದಾರಾ ಎಂದರೆ ಸಾಕ್ಷಿದಾರರು ಆ ಬಗ್ಗೆ ಸರಿಯಾಗಿ ಜ್ಞಾಪಕ ಬರುತ್ತಿಲ್ಲ ಎನ್ನುತ್ತಾರೆ. ಸಹಿ ಮಾಡಿರುವ ಚೀಟಿಯನ್ನು ಸೀಲ್ ಮಾಡಿದ ಬ್ಯಾಗ್ ಮೇಲೆ ಅಂಟಿಸಿದರು. ನಿಮ್ಮ ಪ್ರಕಾರ ಎಷ್ಟು ಸೀಲುಗಳನ್ನು ಹಾಕಿದ್ದಾರೆ ಎಂದರೆ ಸಾಕ್ಷಿದಾರರು ಒಂದು ಸೀಲ್ ಹಾಕಿದ್ದು ನೆನಪಿದೆ ಎನ್ನುತ್ತಾರೆ. ಮು ಮಾಲು 1 ಹಾಕಿದ್ದ ಬಿಳಿ ಬಟ್ಟೆ ಚೀಲದ ಮೇಲೆ ಸ್ಲಿಪ್ ನ್ನು ತೋರಿಸಿ ಅದೇ ಚೀಟಿಯನ್ನು ಅಂಟಿಸಿದ್ದಾ ಎಂದರೆ ಸಾಕ್ಷಿದಾರರು ಅದನ್ನು ಪರಿಶೀಲಿಸಿ ಅದು ಅಲ್ಲ ಎನ್ನುತ್ತಾರೆ.

14. ಸೀಲ್ ಮಾಡಲು ಉಪಯೋಗಿಸಿದ ಮೊಹರನ್ನು ಪೋಲೀಸರು ತಮ್ಮ ಬಳಿಯೇ ಇಟ್ಟುಕೊಂಡರು. ಸ್ಯಾಂಪಲ್ ಸೀಲನ್ನು ರೆಡಿ ಮಾಡಿದ ಬಗ್ಗೆ ನೆನಪಿಲ್ಲ. ಪೋಲೀಸರು 2-3 ಚೀಟಿಗಳ ಮೇಲೆ ನನ್ನ ಸಹಿಯನ್ನು ಪಡೆದರು. ಮುದ್ದೆ ಮಾಲು ಮೇಲೆ ಅಂಟಿಸಲು, ವೀಡಿಯೋ ಸಿಡಿ ಮೇಲೆ ಅಂಟಿಸಲು ಬೇಕೆಂದು 2-3 ಚೀಟಿಗಳಲ್ಲಿ ಪೋಲೀಸರು ನನ್ನ ಸಹಿ ಪಡೆದರು. ನನ್ನ ಜೊತೆ ಪಂಚರು, ಪೋಲೀಸರು ಸಹಾ ಸಹಿ ಮಾಡಿದ್ದಾರೆ. ಚೀಟಿಗಳಲ್ಲಿ ಸಹಿ ಮಾಡಿದ ಮೇಲೆ ಅಲ್ಲಿ ನಿಮ್ಮ ಅಫೀಶಿಯಲ್ ಸೀಲನ್ನು ಹಾಕಿದ್ದೀರಾ ಎಂದರೆ ಸಾಕ್ಷಿದಾರರು ಇಲ್ಲ ಎನ್ನುತ್ತಾರೆ.

15. ದಿನಾಂಕ 12.03.2025 ರಂದು ಆರೋಪಿಯ ಹತ್ತಿರ ಬ್ಯಾಗ್ ಇತ್ತು, ಆ ಬ್ಯಾಗನ್ನು ತೆಗೆದು ನೋಡಿದಾಗ ಅದರಲ್ಲಿ ಒಂದು ಕವರ್ ನಲ್ಲಿ ಬಿಳಿ ಪದಾರ್ಥ ಇತ್ತು ಮತ್ತು ಕವರ್ ಮೇಲೆ ಎಂ.ಡಿ.ಎಂ.ಎ ಎಂದು ಬರೆದಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಕಡೆಯಿಂದ ಆ ಬ್ಯಾಗನ್ನು ಮತ್ತು ಪದಾರ್ಥವನ್ನು ಅಮಾನತ್ತು ಪಡಿಸಿಕೊಳ್ಳಲಾಯಿತು ಮತ್ತು ಆ ಸಮಯದಲ್ಲಿ ನಿ ಪಿ 2 ರಂತೆ ಮಹಜರು ಮಾಡಲಾಯಿತು ಹಾಗೂ ನಿ ಪಿ 3 ರಂತೆ ಫೋಟೋ ತೆಗೆಯಲಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

16. ಆರೋಪಿಯ ವಿಳಾಸ ಕೆ.ಜಿ ಹಳ್ಳಿ, ಬೆಂಗಳೂರು ಎಂದು ಪೋಲೀಸರು ತಿಳಿಸಿದರು. ಪಂಚನಾಮೆಯಲ್ಲಿರುವ ಆರೋಪಿಯ ವಿಳಾಸವನ್ನು ನೋಡಿ ನನ್ನ ಹೇಳಿಕೆಯಲ್ಲಿ ಆತನ ವಿಳಾಸವನ್ನು ಹೇಳಿದ್ದೇನೆ. ಸಿಬ್ಬಂದಿಯ ಪಿಸಿ ಸಂಖ್ಯೆಗಳು ಮಹಜರಿನಲ್ಲಿ ಹೇಳಿದ್ದರೆ, ಆದರೆ ಅವುಗಳ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ. ಮಹಜರು ನೋಡಿ ನಿಮ್ಮ ಹೇಳಿಕೆಯನ್ನು

ಪೋಲೀಸರಿಗೆ ನೀಡಿದ್ದೀರಾ ಎಂದರೆ ಸಾಕ್ಷಿದಾರರು ಆರೋಪಿಯ ವಿಳಾಸ ಮತ್ತು ಪೋಲೀಸ್ ಸಿಬ್ಬಂದಿಯ ಸಂಖ್ಯೆಗಳನ್ನು ಮಹಜರು ನೋಡಿ ಹೇಳಿದ್ದೇನೆ ಎನ್ನುತ್ತಾರೆ.

17. ನೀವು ನಿ ಪಿ 2 ಕ್ಕೆ ಎಷ್ಟು ಸಹಿ ಮಾಡಿದ್ದೀರಿ ಎಂದರೆ ಸಾಕ್ಷಿದಾರರು ಕೊನೆ ಪುಟಕ್ಕೆ ಸಹಿ ಮಾಡಿದ್ದು ನೆನಪಿದೆ ಎನ್ನುತ್ತಾರೆ. ಮಹಜರಿಗೆ ಮೊದಲು ಇನ್ಸ್ ಪೆಕ್ಟರ್ ರವರು ಸಹಿ ಮಾಡಿದರು. ನಂತರ ಪಂಚಸಾಕ್ಷಿದಾರರು ಸಹಿ ಮಾಡಿದರು. ನಂತರ ನಾನು ಸಹಿ ಮಾಡಿದೆ. ಆರೋಪಿ ಸಹಿ ಮಾಡಿದ. ಉಳಿದ ಸಿಬ್ಬಂದಿ ಸಹಿ ಮಾಡಿದ ಬಗ್ಗೆ ಸರಿಯಾಗಿ ನೆನಪಿಲ್ಲ. ಆ ಸ್ಥಳದಲ್ಲಿ ನಿ ಪಿ 2 ರಂತೆ ಮಹಜರು ಮಾಡಿಲ್ಲ ಮತ್ತು ಅಲ್ಲಿ ಯಾವುದೇ ಸಹಿ ಪೋಲೀಸರು ಪಡೆದಿಲ್ಲ ಎಂದರೆ ಸರಿಯಲ್ಲ. ನಿ ಪಿ 2 ಕ್ಕೆ ಆರೋಪಿ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ.

18. ಮು ಮಾಲು 1 ನ್ನು ಹಾಕಿದ್ದ ಬ್ಯಾಗನ್ನು ಸಾಕ್ಷಿದಾರರಿಗೆ ತೋರಿಸಿ ಇದೇ ಚೀಲದಲ್ಲಿ ಮು ಮಾಲು 1 ನ್ನು ಹಾಕಿದ್ದರಾ ಎಂದರೆ ಸಾಕ್ಷಿದಾರರು ಹೌದು ಎನ್ನುತ್ತಾರೆ. ಪೋಲೀಸರ ಮಾತುಕೇಳಿ ಏನೂ ವಿಷಯ ಗೊತ್ತಿಲ್ಲದೇ ಇದ್ದರೂ ಸಹಾ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u> ಇಲ್ಲ.

**(**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ಅವರ ಹೇಳಿಕೆಯನ್ನು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿ**,** ಪುನಃ ಓದಿ ಹೇಳಲಾಯಿತು ಮತ್ತು ಸಾಕ್ಷಿದಾರರು ಸರಿ ಇದೆ ಎಂದು ತಿಳಿಸುತ್ತಾರೆ.**)**

**ಓ. ಹೇ. ಕೇ. ಸ. ಇದೆ,**

**(**ವಿಜಯಕುಮಾರ್ ಎಂ. ಆನಂದಶೆಟ್ಟಿ**)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೋಲಾರ